# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 06.09.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 40 ಮೈಕ್ರಾನ್‌ಗಿಂತ ಕಡಿಮೆ ದಪ್ಪವಿರುವ ಪ್ಲಾಸ್ಟಿಕ್ ಬಳಕೆ ನಿಷೇಧಿಸಲಾಗಿದೆ. ಈ ಬಗ್ಗೆ ಸಾರ್ವಜನಿಕರು ಹಾಗೂ ವ್ಯಾಪಾರಸ್ಥರಿಗೂ ಕೂಡಾ ತಿಳುವಳಿಕೆ ನೀಡಲಾಗಿದೆ. ಆದರೂ ಕೆಲವು ಅಂಗಡಿಗಳಲ್ಲಿ 40 ಮೈಕ್ರಾನ್‌ಗಿಂತ ಕಡಿಮೆ ದಪ್ಪವಿರುವ ಪ್ಲಾಸ್ಟಿಕ್ ಬಳಸಲಾಗುತ್ತಿದೆ ಎಂಬ ಖಚಿತ ಮಾಹಿತಿಯೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯದ ಪರಿಸರ ವಿಭಾಗದ ಸಿಬ್ಬಂದಿಯವರು ಇಂದು ಕಾಟನ್‌ಪೇಟೆ ಮತ್ತು ಸುತ್ತಮುತ್ತಲಿನಲ್ಲಿರುವ ಮಳಿಗೆಗಳ ಮೇಲೆ ದಾಳಿ ನಡೆಸಿ, ಸುಮಾರು 320 ಕೆ.ಜಿ. 40 ಮೈಕ್ರಾನ್‌ಗಿಂತ ಕಡಿಮೆ ದಪ್ಪವಿರುವ ಪ್ಲಾಸ್ಟಿಕ್‌ಗಳನ್ನು ವಶಪಡಿಸಿಕೊಂಡು ಒಟ್ಟು 37,000/- ರೂ.ಗಳ ದಂಡ ವಿಧಿಸಲಾಗಿದೆ ಎಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 06.09.2011**

ಮೆಟ್ರೋ ರೈಲು ಹಾದುಹೋಗುವ ಮಾರ್ಗಗಳಲ್ಲಿ ರಸ್ತೆಗಳು ಹಾಳಾಗಿ ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ, ರಸ್ತೆ ದುರಸ್ಥಿ ಕಾಮಗಾರಿಯನ್ನು ಸೆಪ್ಟೆಂಬರ್ 25ರ ಒಳಗಾಗಿ ಪೂರ್ಣಗೊಳಿಸಲು ಪೂಜ್ಯ ಮಹಾಪೌರರಾದ ಶ್ರೀಮತಿ ಶಾರದಮ್ಮ ರವರು ಮೆಟ್ರೋ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೆಟ್ರೋ ರೈಲು ಮಾರ್ಗ ನಿರ್ಮಾಣ ಕಾರ್ಯದಿಂದ ಮತ್ತು ಇತ್ತೀಚೆಗೆ ನಗರದಲ್ಲಿ ಸುರಿದ ಭಾರಿ ಮಳೆಯಿಂದ ಆ ಮಾರ್ಗಗಳಲ್ಲಿ ರಸ್ತೆಗಳಲ್ಲಿ ಆಳವಾದ ಗುಂಡಿಗಳು ಬಿದ್ದು, ಕೆಲವಡೆ ರಸ್ತೆ ಸಂಪೂರ್ಣ ಹಾಳಾಗಿ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಗಿರುವ ಹಿನ್ನೆಲೆಯಲ್ಲಿ ಪೂಜ್ಯ ಮಹಾಪೌರರು ಇಂದು ಮೆಟ್ರೋ ಇಲಾಖೆ, ಬೆಸ್ಕಾಂ, ಜಲಮಂಡಳಿ ಮತ್ತು ಪಾಲಿಕೆಯ ಅಧಿಕಾರಿಗಳನ್ನೊಳಗೊಂಡ ಸಭೆಯನ್ನು ಕರೆದು, ನಗರದಲ್ಲಿ ಸಾರ್ವಜನಿಕರು ರಸ್ತೆಗಳ ಪರಿಸ್ಥಿತಿಯನ್ನು ನೋಡಿ ಮೆಟ್ರೋ ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಪಾಲಿಕೆಗೆ ದೂಷಿಸುತ್ತಿದ್ದಾರೆ. ಮೆಟ್ರೋ ಅಧಿಕಾರಿಗಳು ಇದನ್ನೆಲ್ಲಾ ಗಮನಿಸದೇ ಇರುವುದು ಶೋಚನೀಯ ಸಂಗತಿ ಎಂದು ತಿಳಿಸಿದ್ದಾರೆ.

ನಗರದ ನಾಗರಿಕರಿಗೆ ಸಮರ್ಪಕವಾದ ಮೂಲಭೂತ ಸೌಕರ್ಯ ಕಲ್ಪಿಸುವುದು ಪಾಲಿಕೆ ಜವಾಬ್ದಾರಿ. ಅಧಿಕಾರಿಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ರಸ್ತೆ ದುರಸ್ಥಿ ಕಾಮಗಾರಿ ಪ್ರಾರಂಭಿಸಲು ಸೂಚನೆ ನೀಡಿದರು.

ಉಪ ಮಹಾಪೌರರಾದ ಶ್ರೀ ಎಸ್. ಹರೀಶ್ ರವರು ಮಾತನಾಡಿ, ಕಳೆದ ಒಂದು ವಾರದಿಂದ ಮೆಟ್ರೋ ರೈಲು ಹಾದು ಹೋಗುವ ರಸ್ತೆಗಳಲ್ಲಿ ಸಂಚರಿಸಿ ವಿಡಿಯೋಗ್ರಾಫ್ ಮಾಡಿಸಿದ್ದೇನೆ. ಕೆಲವು ಕಡೆ ದ್ವಿಚಕ್ರ ವಾಹನ ಸಂಚರಿಸಲಿಕ್ಕೆ ಆಗುವುದಿಲ್ಲ. ಆ ಪರಿಸ್ಥಿತಿ ಬಂದಿದೆ. ಮೆಟ್ರೋ ಅಧಿಕಾರಿಗಳು ವಿಧಾನಸೌಧ ಸುತ್ತಮುತ್ತಲು ಮೆಟ್ರೋ ರಸ್ತೆಯಲ್ಲಿ ಅಚ್ಚುಕಟ್ಟಾಗಿ ನಿರ್ವಹಿಸಿದರೆ ಸಾಲದು. ಬೇರೆ ಕಡೆ ಓಡಾಡುವವರು ನಾಗರಿಕರಲ್ಲವೆ. ಅವರಿಗೂ ಒಳ್ಳೆಯ ಸೌಲಭ್ಯ ಕಲ್ಪಿಸಬೇಕು. ಈ ರೀತಿ ತಾರತಮ್ಯ ಸರಿಯಲ್ಲ. ಆದ್ದರಿಂದ ಕೂಡಲೇ ದುರಸ್ಥಿ ಕಾರ್ಯ ಶುರು ಮಾಡಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಆರ್.ನಂಜುಂಡಪ್ಪ ರವರು ಮೆಟ್ರೋ ಅಧಿಕಾರಿಗಳೊಂದಿಗೆ ಮಾತನಾಡಿ, ಪ್ರತಿದಿನ ಯಾವ ಯಾವ ರಸ್ತೆಗಳಲ್ಲಿ ದುರಸ್ಥಿ ಕಾರ್ಯ ಕೈಗೊಳ್ಳಬೇಕೆಂದು ಕ್ರಿಯಾ ಯೋಜನೆ ತಯಾರಿಸಿ, ನಾಳೆ ಪಾಲಿಕೆ ಮುಖ್ಯ ಅಭಿಯಂತರರುಗಳಿಗೆ ಒದಗಿಸಿ, ಅವರುಗಳು ಮೇಲ್ವಿಚಾರಣೆ ಮಾಡಲಿಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸಿದರು. ರಸ್ತೆ ದುರಸ್ಥಿ ಕಾರ್ಯ ಪರಿಶೀಲನೆಗೆ ಶುಕ್ರವಾರದಿಂದ ಮಹಾಪೌರರು, ಉಪ ಮಹಾಪೌರರು, ಆಡಳಿತ ಪಕ್ಷದ ನಾಯಕರು, ಆಯುಕ್ತರು, ಪ್ರಧಾನ ಅಭಿಯಂತರರೊಂದಿಗೆ ತಪಾಸಣೆ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಮೆಟ್ರೋ ಮುಖ್ಯ ಅಭಿಯಂತರರುಗಳಾದ ಶ್ರೀ ಪಿ.ಎನ್. ನಾಯಕ್ (ಉತ್ತರ), ಶ್ರೀ ಆರ್.ಆರ್. ದೊಡ್ಡಿಹಳ್ಳಿ (ದಕ್ಷಿಣ) ಮತ್ತು ಶ್ರೀ ಡಿ.ಎಂ. ರಾಮಶೇಕರ್ (ರೀಚ್-2) ರವರುಗಳು ಚರ್ಚೆ ಮಾಡಿ, ಸೆಪ್ಟೆಂಬರ್ 25ರ ಒಳಗಾಗಿ ರಸ್ತೆ ದುರಸ್ಥಿ ಕಾಮಗಾರಿ ಪೂರ್ಣಗೊಳಿಸುವುದಾಗಿ ಮಹಾಪೌರರಿಗೆ ಭರವಸೆ ನೀಡಿದರು.

ಈ ಸಭೆಯಲ್ಲಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ.ಹೆಚ್. ರಾಮಚಂದ್ರ, ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಮೋಹನ್ ಕುಮಾರ್, ಪ್ರಧಾನ ಅಭಿಯಂತರರಾದ ಶ್ರೀ ಬಿ.ಟಿ. ರಮೇಶ್, ಜಲಮಂಡಳಿಯ ಪ್ರಧಾನ ಅಭಿಯಂತರರಾದ ಶ್ರೀ ವೆಂಕಟರಾಜು, ಬೆಸ್ಕಾಂ ಮುಖ್ಯ ಅಭಿಯಂತರರಾದ ಶ್ರೀ ಅಶೋಕ್ ಅಂಗಡಿಯವರು ಹಾಗೂ ಪಾಲಿಕೆಯ ವಲಯ ಮುಖ್ಯ ಅಭಿಯಂತರರುಗಳು ಸಭೆಯಲ್ಲಿ ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 06.09.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಕೆ.ಎನ್. ಗೀತಾ ಶಶಿಕುಮಾರ್ ರವರು ಇಂದು ನಗರದ ಶೇಷಾದ್ರಿಪುರಂ, ಶಿವಾನಂದ ವೃತ್ತ, ಕುಮಾರಕೃಪಾ ಪ್ರದೇಶಗಳಲ್ಲಿರುವ ಹೋಟೆಲ್‌ಗಳು ಹಾಗೂ ಕಲ್ಯಾಣ ಮಂಟಪಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಸ್ವಚ್ಛತೆಯನ್ನು ಕಾಪಾಡದ ಹಿನ್ನೆಲೆಯಲ್ಲಿ ಕಾಮತ್ ಯಾತ್ರಿ ನಿವಾಸ್ ಹೋಟೆಲ್ ಹಾಗೂ ಲಕ್ಷ್ಮೀಪದ್ಮನಾಭ ಕಲ್ಯಾಣ ಮಂಟಪದ ಮಾಲೀಕರಿಗೆ ನೋಟೀಸ್ ಜಾರಿ ಮಾಡಲು ಸಂಬಂಧಪಟ್ಟ ಆರೋಗ್ಯ ಅಧಿಕಾರಿಗಳಿಗೆ ಸ್ಥಾಯಿ ಸಮಿತಿಯ ಅಧ್ಯಕ್ಷರು ಸೂಚನೆ ನೀಡಿದರು.

ಮಳೆಗಾಲವಾಗಿರುವುದರಿಂದ ನಗರದಲ್ಲಿ ಸಾಂಕ್ರಾಮಿಕ ರೋಗಗಳು ಹರಡುತ್ತಿರುವ ಹಿನ್ನೆಲೆಯಲ್ಲಿ ಹೋಟೆಲ್‌ಗಳು ಹಾಗೂ ಕಲ್ಯಾಣ ಮಂಟಪಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ಮತ್ತು ಗ್ರಾಹಕರಿಗೆ ಬಿಸಿ ನೀರು ಒದಗಿಸುವುದು ತುಂಬಾ ಅವಶ್ಯಕವಾಗಿದೆಂದು ತಿಳಿಸಿ, ಇನ್ನುಮುಂದೆ ಹೋಟೆಲ್‌ಗಳು ಹಾಗೂ ಕಲ್ಯಾಣ ಮಂಟಪಗಳಲ್ಲಿ ಸ್ವಚ್ಛತೆ ಕಾಪಾಡದಿದ್ದಲ್ಲಿ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಆರೋಗ್ಯ ಸ್ಥಾಯಿ ಸಮಿತಿಯ ಸದಸ್ಯರುಗಳಾದ ಶ್ರೀ ನಟರಾಜ್, ಶ್ರೀಮತಿ ಶಶಿಕಲಾ ಕಿರಣ್, ಶ್ರೀಮತಿ ಇರ್ಷಾದ್ ಬೇಗಂ, ಶ್ರೀ ಮುನಿರಾಜು, ಶ್ರೀ ಶ್ರೀನಿವಾಸ್ ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***<u>ಪತ್ರಿಕಾ ಪ್ರಕಟಣೆ</u>*** **ದಿನಾಂಕ: 06.09.2011**

ದಿನಾಂಕ: 06.09.2011 ರಂದು ಉಪ ಮಹಾಪೌರರಾದ ಶ್ರೀ ಎಸ್. ಹರೀಶ್ ರವರು ಇನ್ನೋವಾ ಸಂಖ್ಯೆ: ಕೆ.ಎ-04, ಎಂ.ಸಿ-5400 ವಾಹನವು ಸಾರ್ವಜನಿಕ ರಸ್ತೆಗಳಲ್ಲಿ ಜಾಹೀರಾತು ಪ್ರದರ್ಶಿಸಲು ವಾಹನದ ಎಡಗಡೆ, ಬಲಗಡೆ ಮತ್ತು ಹಿಂಬದಿಯಲ್ಲಿ ಜಾಹೀರಾತು ಹಾಕಿದ್ದನ್ನು ಗಮನಿಸಿ, ವಾಹನವನ್ನು ಜಪ್ತಿ ಮಾಡಿದರು.

ಘನ ಉಚ್ಛ ನ್ಯಾಯಾಲಯದ ಆದೇಶದಂತೆ ಇಂತಹ ಜಾಹೀರಾತುಗಳನ್ನು ನಿಷೇಧಿಸಿದ್ದು, R.T.A. (Regional Transport Authority) ರವರಿಂದ ಅನುಮತಿ ನೀಡಿದ್ದಲ್ಲಿ ಮಾತ್ರ ಇಂತಹ ವಾಹನಗಳ ಮೇಲೆ ಜಾಹೀರಾತು ಪ್ರದರ್ಶಿಸಬಹುದಾಗಿದೆ.

ಸದರಿ ವಾಹನದ ಮಾಲೀಕರು ಜಾಹೀರಾತು ನೀತಿ ಉಲ್ಲಂಘನೆ ಮಾಡಿರುವುದರಿಂದ ವಾಹನ ಮಾಲೀಕರಿಗೆ 5,000/- ರೂ.ಗಳ ದಂಡವನ್ನು ವಿಧಿಸಿ, ವಸೂಲು ಮಾಡಲಾಗಿರುತ್ತದೆ. ಇನ್ನು ಮುಂದೆ ಈ ರೀತಿ ಜಾಹೀರಾತು ನೀತಿ ಉಲ್ಲಂಘನೆ ಮಾಡಿ, ಪ್ರದರ್ಶಿಸಿದರೆ ಅಂತಹವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದೆಂದು ಉಪ ಮಹಾಪೌರರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**